
**ಆರತಿ ಘಟಿಕಾರ್**

ಕಲೆ: ಪ್ರವೀಣ್ ಆಚಾರ್ಯ



# ಚಾರ್ಜಾಯಣ

ಜಡವಾಗಿ ಬಿದ್ದ ನನ್ನ ಮೊಬೈಲು ಚಾರ್ಜ್‌ನಿಂದ ಜೀವತಳೆದು ಕೆಲವೇ ಸೆಕೆಂಡುಗಳಲ್ಲಿ ಪ್ರಕಾಶಮಾನವಾಗಿ ಬೆಳಗುವುದನ್ನು ನೋಡುವುದು ಒಂದು ಖುಷಿಯ ಅನುಭವವೆ! ಆ ಸೂರ್ಯ ಸ್ವಯಂ ಬೆಳಕಾದರೆ, ನನ್ನ ಮೊಬೈಲಿಣಿ ಯಾವಾಗಲೂ ತುರ್ತಾಗಿ ಡ್ರಿಪ್ಸ್ ಏರಿಸಿಕೊಂಡ ರೋಗಿಯಂತೆ ಆಗಾಗ ಚೇತರಿಸಿಕೊಳ್ಳುತ್ತಿರುತ್ತದೆ. ಹಾಗೆ ಚೇತರಿಸಿಕೊಳ್ಳುವ ಮೊಬೈಲನ್ನು 'ಈಗಲೇ ಬ್ಯಾಟರಿ ಮುಗಿದುಹೋಗಬೇಕೆ' ಎನ್ನುತ್ತ ನೋಡುತ್ತ ನಿಲ್ಲುವುದು ನನ್ನ ದೈನಿಂದಿನ ಅನಿವಾರ್ಯ ಅಭ್ಯಾಸಗಳಲ್ಲಿ ಒಂದಾಗಿದೆ. ನಮ್ಮ ಮನೆಯಲ್ಲಿ ನನ್ನ 'ಚಾರ್ಜ್ ಪುರಾಣ'ವು ಯಾರೂ ನೋಡದ, ನೋಡಿದರೂ ತಲೆಕೆಡಿಸಿಕೊಳ್ಳದ ದೈನಿಕದ ಧಾರಾವಾಹಿ ಎಂಬುದಕ್ಕೆ ಪೀಠಿಕೆಯಾಗಿ ಈ ಮಾತುಗಳನ್ನು ಹೇಳಿದೆ.

ಮೊಬೈಲಿಗೆ ಸರಿಯಾದ ಹೊತ್ತಿಗೆ ಸಾಕಷ್ಟು ಕೂಳು ಕೊಟ್ಟರೆ ಅರ್ಥಾತ್ ಬ್ಯಾಟರಿ ಪೂರ್ತಿಯಾಗುವವರೆಗೂ ಚಾರ್ಜ್ ಹರಿಸಿದಲ್ಲಿ ಹೊಟ್ಟೆ ತುಂಬಾ ಹಾಲು ಕುಡಿದ ಮಕ್ಕಳಂತೆ ಕಿರಿಕಿರಿ ಮಾಡದೆ ಆಡಿಕೊಂಡಿರುತ್ತದೆ. ಆದರೆ, ಇದಕ್ಕೂ ಪರಿಪಾಟಲು ಪಡುವ ನಾನು ಮೊಬೈಲನ್ನು ಪಾಪ ಅರೆಹೊಟ್ಟೆಯಲ್ಲೇ ಎಬ್ಬಿಸಿ, ಫೇಸ್‌ಬುಕ್–ವಾಟ್ಸ್ಆ್ಯಪುಗಳಲ್ಲಿ ಅರ್ಧಕ್ಕೆ ನಿಲ್ಲಿಸಿದ ನನ್ನ ಘನಘೋರ ಕಾಮೆಂಟು, ಸಂದೇಶಗಳನ್ನು ಪೂರ್ಣಗೊಳಿಸಲು ಗಡಿಬಿಡಿ ಗುಂಡಕ್ಕನಾಗಿ ಬಿಡುತ್ತೇನೆ. 'ಛೆ! ಬದುಕೋಕೂ ಬಿಡಲ್ಲ, ಸಾಯಕ್ಕೂ ಬಿಡಲ್ಲ! ಎಂತಹ ಕೆಟ್ಟ ಜನ' ಎಂದು ಅದು ಫುಲ್ ಫೀಲಿಂಗಿನಲ್ಲಿ ಫಿಲ್ಮಿ ಡೈಲಾಗ್ ಹೊಡೆದು ನನ್ನನ್ನು ಬೈಯ್ದುಕೊಳ್ಳುತ್ತಿರಬಹುದು ಎನ್ನುವ ಅನುಮಾನ ಸಹ ನನಗೆ ಕಾಡುವುದುಂಟು! ಈ ಕಾರಣಕ್ಕಾಗಿಯೇ ಮೊಬೈಲಿನ ತೆರೆಯ ಮೇಲೆ ಕಾಣಿಸುವ 'ಬ್ಯಾಟರಿ ಫುಲ್, ರಿಮೂವ್ ಚಾರ್ಜರ್' ಎನ್ನುವ ದೃಶ್ಯ ನನ್ನ ಮಟ್ಟಿಗಂತೂ ಅಪರೂಪ.

ಉಪ್ಪು, ಹುಳಿ, ಖಾರವನ್ನು ಉಂಡ ನಮ್ಮ ನಾಲಿಗೆ ದಿನಕ್ಕೊಂದು ತರಾವರಿ ತಿಂಡಿ ತಿನಿಸು ಬಯಸಿದರೆ ಈ ಮೊಬೈಲಿಗೆ ಕಿಂಚಿತ್ತೂ ಏಕತಾನತೆ ಕಾಡದು. ಅದು ಯಾವುದೇ ರೀತಿಯ, ಮಾಡೆಲ್‌ನ ಮೊಬೈಲ್ ಆಗಿದ್ದರೂ ದಿನವಿಡಿ ದುಡಿಯಲು ಅದಕ್ಕೆ ಬೇಕಾಗಿರುವ ಶಕ್ತಿ, ವಿದ್ಯುಚ್ಛಕ್ತಿ ಮಾತ್ರ. ನಾವೆಂತಹ ನಿಷ್ಕರುಣಿಗಳು ನೋಡಿ! ನಮಗಾಗಿ ದುಡಿಯುವ ಅದಕ್ಕೆ ಅದನ್ನು ಸರಿಯಾದ ಸಮಯಕ್ಕೆ ಹೊಟ್ಟೆಗೆ ಕೊಡಲೂ ನಾವು